# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಟರ್ನ್ ಕೀ ಆಧಾರಿತ ಬೂದಿಹಾಳ ಪೀರಾಪುರ ಏತ ನೀರಾವರಿ ಯೋಜನೆಗೆ ವಿದ್ಯುತ್ ಪ್ರಸರಣಕ್ಕೆ "Switching Station" ಸ್ಥಾಪಿಸಲು ಕೃಷ್ಣಾ ಭಾಗ್ಯ ಜಲ ನಿಗಮದ ವಶದಲ್ಲಿರುವ ಜಮೀನನ್ನು ಇಂಧನ ಇಲಾಖೆಯ ಅಧೀನದಲ್ಲಿರುವ KPTCL ಸಂಸ್ಥೆಗೆ ಹಸ್ತಾಂತರಿಸುವ ಕುರಿತು.

*****

**ಓದಲಾಗಿದೆ:-** ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: ವ್ಯನಿ/ಕೃಭಾಜನಿನಿ/ತಾಂತ್ರಿಕ-3/26/2018-19/2276 ದಿನಾಂಕ:05/10/2021.

**ಪ್ರಸ್ತಾವನೆ:**

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ 20,243 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಬೂದಿಹಾಳ ಪೀರಾಪುರ ಏತ ನೀರಾವರಿ ಯೋಜನೆಯ ಮುಖ್ಯ ಸ್ಥಾವರ ನಿರ್ಮಾಣ ಕಾಮಗಾರಿಯನ್ನು ಮೆ:ಅಮೃತ ಕನ್ಸ್ ಸ್ಟ್ರಕ್ಷನ್ ಪ್ರೈ. ಲಿ,- ಮೆ: ಪ್ರತಿಭಾ ಇಂಡಸ್ಟ್ರೀಸ್ ಲಿ. (ಜೆ.ವಿ), ಗುತ್ತಿಗೆದಾರರು ಇವರಿಗೆ ಸೆಪ್ಟೆಂಬರ್, 2017ರಲ್ಲಿ ಟರ್ನ್ ಕೀ ಆಧಾರದ ಮೇಲೆ ಗುತ್ತಿಗೆ ವಹಿಸಲಾಗಿರುತ್ತದೆ. ಸದರಿ ಯೋಜನೆಯಡಿಯ ಮುಖ್ಯ ಸ್ಥಾವರ ನಿರ್ಮಾಣ ಕಾಮಗಾರಿಯಲ್ಲಿ ಈ ಮೊದಲು ಲಿಂಗಸುಗೂರುನಿಂದ 220 ಕೆವಿ ಲೈನ್ ಟ್ಯಾಪಿಂಗ್ ಮಾಡಿ ಸುಮಾರು 39 ಕಿಮೀ. ರವರೆಗೆ ಬೂದಿಹಾಳ ಪೀರಾಪುರ ಏತ ನೀರಾವರಿ ಯೋಜನೆಯ ಮುಖ್ಯ ಸ್ಥಾವರದವರೆಗೆ ವಿದ್ಯುತ್‌ನ್ನು ಪಡೆಯಲು ಅಂದಾಜಿಸಲಾಗಿತ್ತು ಎಂದು ತಿಳಿಸುತ್ತಾ, ಯೋಜನೆಗೆ ಅವಶ್ಯವಿರುವ ವಿದ್ಯುತ್ ಪ್ರಸರಣಕ್ಕೆ ಲಿಂಗಸುಗೂರು ನಿಂದ ಟ್ಯಾಪಿಂಗ್ ಮಾಡುವ ಬದಲಾಗಿ ನಾರಾಯಣಪುರದಿಂದ ಟ್ಯಾಪಿಂಗ್ ಮಾಡಿ Switching Station ನ್ನು ಸ್ಥಾಪಿಸುವ ಸಲುವಾಗಿ ಮುದ್ದೇಬಿಹಾಳ ತಾಲ್ಲೂಕಿನ ನಾಗಬೇನಾಳ ಗ್ರಾಮದ ಸರ್ವೆ ನಂ.84 ರಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ವಶದಲ್ಲಿರುವ 23ಎ-20ಗುಂಟೆ ಕ್ಷೇತ್ರದ ಜಮೀನು ಪೈಕಿ 10 ಎಕರೆ ಕ್ಷೇತ್ರದ ಜಮೀನನ್ನು KPTCL ಸಂಸ್ಥೆಗೆ ಹಸ್ತಾಂತರಿಸಲು ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ರವರು ಮೇಲೆ ಓದಲಾದ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ಇವರ ಪತ್ರದಲ್ಲಿ, ಮುದ್ದೇಬಿಹಾಳ ತಾಲ್ಲೂಕಿನ ನಾಗಬೇನಾಳ ಗ್ರಾಮದ ಸರ್ವೆ ನಂ.84 ರಲ್ಲಿ 23ಎ-20ಗುಂಟೆ ಕ್ಷೇತ್ರದ ಜಮೀನಿನಲ್ಲಿ "Switching Station" ಗೆ ಅವಶ್ಯವಿರುವ 10 ಎಕರೆ ಕ್ಷೇತ್ರದ ಜಮೀನನ್ನು KPTCL ಸಂಸ್ಥೆಗೆ ಹಸ್ತಾಂತರಿಸುವ ಕುರಿತು ದಿನಾಂಕ:09/07/2019 ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿಯ 121ನೇ ಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಮಂಡಳಿಯು ವಿಸ್ತೃತವಾಗಿ ಪ್ರಸ್ತಾವನೆ ಕುರಿತು ಅವಲೋಕಿಸಿ, ಈ ಕೆಳಗಿನ ಅಂಶಗಳಿಗೆ ಮಂಡಳಿ ಸಭೆಯು ಅನುಮೋದನೆ ನೀಡಿರುತ್ತದೆ ಎಂದು ತಿಳಿಸಲಾಗಿದೆ;

1. KPTCL ಸಂಸ್ಥೆಯವರು ಪ್ರಸ್ತಾಪಿಸಿರುವ ಹಾಗೂ ಮುಖ್ಯ ಇಂಜಿನಿಯರ್, ಆಲಮಟ್ಟಿ ಇವರ ಶಿಫಾರಸ್ಸಿನಂತೆ ಮೂರು ಏತ ನೀರಾವರಿ ಯೋಜನೆಗಳಿಗೆ ಅನುಕೂಲ ಹಾಗೂ ನಿಗಮದ ಆರ್ಥಿಕ ಹೊರೆಯನ್ನು ಕಡಿಮೆಯಾಗುವ ನಿಟ್ಟಿನಲ್ಲಿ ಲಿಂಗಸುಗೂರು ನಿಂದ ಟ್ಯಾಪಿಂಗ್ ಮಾಡುವ ಬದಲಾಗಿ ನಾರಾಯಣಪುರ ದಿಂದ ಟ್ಯಾಪಿಂಗ್ ಮಾಡಿ Switching Station ನ್ನು ಮುದ್ದೇಬಿಹಾಳ ತಾಲ್ಲೂಕಿನ ನಾಗಬೇನಾಳ ಗ್ರಾಮದ ಸರ್ವೆ ನಂ.84 ರಲ್ಲಿ 10 ಎಕರೆ ಕ್ಷೇತ್ರದ ಜಮೀನಿನಲ್ಲಿ Switching Station ನ್ನು ಸ್ಥಾಪಿಸುವುದು;

2. ಮುದ್ದೇಬಿಹಾಳ ತಾಲ್ಲೂಕಿನ ನಾಗಬೇನಾಳ ಗ್ರಾಮದ ಸರ್ವೆ ನಂ.84 ರಲ್ಲಿ 23ಎ-20ಗುಂಟೆ ಕ್ಷೇತ್ರದ ಜಮೀನು ಕೃಷ್ಣಾ ಭಾಗ್ಯ ಜಲ ನಿಗಮದ ವಶದಲ್ಲಿದ್ದು, ಇದರಲ್ಲಿ 10 ಎಕರೆ ಕ್ಷೇತ್ರದ ಜಮೀನನ್ನು KPTCL ಸಂಸ್ಥೆಗೆ ಹಸ್ತಾಂತರಿಸುವುದು ಹಾಗೂ ಸದರಿ ಕ್ಷೇತ್ರದ ಜಮೀನಿಗೆ ತಗಲುವ ವೆಚ್ಚದ ಮೊತ್ತವನ್ನು ಗುತ್ತಿಗೆದಾರರಾದ ಮೆ:ಅಮೃತ ಕನ್ಸ್ ಸ್ಟ್ರಕ್ಷನ್ ಪ್ರೈ. ಲಿ, - ಮೆ: ಪ್ರತಿಭಾ ಇಂಡಸ್ಟ್ರೀಸ್ ಲಿ. (ಜೆ.ವಿ) ಇವರು ಭರಿಸುವುದಕ್ಕೆ ಹಾಗೂ ಗುತ್ತಿಗೆದಾರರು ಸದರಿ ಜಮೀನಿನ ಮೇಲೆ ಯಾವುದೇ ಹಕ್ಕು ಸಾಧಿಸದೇ ಇರುವಂತೆ ಷರತ್ತು ವಿಧಿಸುವುದು;



10/3/2022

3. Switching Station ನ್ನು ನಿರ್ಮಾಣ ಮಾಡಲು ಅವಶ್ಯವಿರುವ ಮುದ್ದೇಬಿಹಾಳ ತಾಲ್ಲೂಕಿನ ನಾಗಬೇನಾಳ ಗ್ರಾಮದ ಸರ್ವೆ ನಂ.84 ರಲ್ಲಿ 10 ಎಕರೆ ಕ್ಷೇತ್ರದ ಜಮೀನನ್ನು ಪ್ರಚಲಿತ ಮಾರ್ಗಸೂಚಿ ಬೆಲೆಯ ಎರಡು ಪಟ್ಟು ಮೊತ್ತಕ್ಕೆ ಅಥವಾ ಈಗಿನ ಮಾರುಕಟ್ಟೆ ಬೆಲೆ ಇವುಗಳಲ್ಲಿ ಯಾವ ಬೆಲೆ ಹೆಚ್ಚೋ ಆ ಬೆಲೆಗೆ ಹಸ್ತಾಂತರಿಸಲು, ಸರ್ಕಾರದ ಕಂದಾಯ ಇಲಾಖೆಯ ಸುತ್ತೋಲೆಗಳ ಷರತ್ತು ಮತ್ತು ನಿಬಂಧನೆಗಳನ್ವಯ ಜಲ ಸಂಪನ್ಮೂಲ ಇಲಾಖೆಯ ಮೂಲಕ ಕಂದಾಯ ಇಲಾಖೆಯ ಸಹಮತಿ ಪಡೆದು ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರಿಸುವುದು;

4. ಲಿಂಗಸುಗೂರುನಿಂದ ಟ್ಯಾಪಿಂಗ್ ಮಾಡುವ ಬದಲಾಗಿ ನಾರಾಯಣಪುರದಿಂದ ಟ್ಯಾಪಿಂಗ್ ಮಾಡಿದಾಗ Transmission Line ನಲ್ಲಿ ತಾಂತ್ರಿಕವಾಗಿ ಉಳಿತಾಯವಾಗುವ ಮೊತ್ತವನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾವು ಮಾಡುವುದು.

ಅದರನ್ವಯ, ದಿನಾಂಕ:09/07/2019 ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿಯ 121ನೇ ಸಭೆಯಲ್ಲಿಯ ತೀರುವಳಿಯಂತೆ, ಮುದ್ದೇಬಿಹಾಳ ತಾಲ್ಲೂಕಿನ ನಾಗಬೇನಾಳ ಗ್ರಾಮದ ಸರ್ವೆ ನಂ.84 ರಲ್ಲಿ 23ಎ-20ಗುಂಟೆ ಕ್ಷೇತ್ರದ ಜಮೀನಿನಲ್ಲಿ Switching Station ನ್ನು ನಿರ್ಮಾಣ ಮಾಡಲು ಅವಶ್ಯವಿರುವ 10 ಎಕರೆ ಕ್ಷೇತ್ರದ ಜಮೀನನ್ನು KPTCL ಸಂಸ್ಥೆಗೆ ಹಸ್ತಾಂತರಿಸುವ ಕುರಿತು ಅನುಮೋದನೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ಇವರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 252 ಕೆಬಿಎನ್ 2021,ಬೆಂಗಳೂರು, ದಿನಾಂಕ: 10/03/2022.**

ಬೂದಿಹಾಳ-ಪೀರಾಪೂರ ಏತ ನೀರಾವರಿ ಯೋಜನೆಯ ವಿದ್ಯುತ್ ಪ್ರಸರಣಕ್ಕೆ Switching Station ನ್ನು ಸ್ಥಾಪಿಸಲು ಕೃಷ್ಣಾ ಭಾಗ್ಯ ಜಲ ನಿಗಮದ ವ್ಯಾಪ್ತಿಯಲ್ಲಿರುವ ಮುದ್ದೇಬಿಹಾಳ ತಾಲ್ಲೂಕಿನ ನಾಗಬೇನಾಳ ಗ್ರಾಮದ ಸರ್ವೆ ನಂ.84 ರಲ್ಲಿ 23ಎ-20ಗುಂಟೆ ಕ್ಷೇತ್ರದ ಜಮೀನಿನಲ್ಲಿ 10 ಎಕರೆ ಕ್ಷೇತ್ರದ ಜಮೀನನ್ನು ಇಂಧನ ಇಲಾಖೆಯ ಅಧೀನದಲ್ಲಿರುವ KPTCL ಸಂಸ್ಥೆಗೆ ಹಸ್ತಾಂತರಿಸಲು ಅನುಮೋದನೆ ನೀಡಿದೆ.

ಈ ಕುರಿತಂತೆ, ಸದರಿ ಯೋಜನೆಯ ಅನುಷ್ಠಾನದಲ್ಲಿ ದಿನಾಂಕ:09/07/2019 ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿಯ 121ನೇ ಸಭೆಯಲ್ಲಿ ಅನುಮೋದನೆಯಾಗಿರುವ ನಾಲ್ಕೂ ಅಂಶಗಳನ್ನು ಯಥಾವತ್ತಾಗಿ ಪಾಲಿಸಲು ಆದೇಶಿಸಿದೆ.

ಈ ಆದೇಶವನ್ನು ಕಂದಾಯ ಇಲಾಖೆಯ ಆದೇಶ ಸಂಖ್ಯೆ:ಆರ್‌ಡಿ 32 ಎಲ್‌ಜಿಪಿ 2019 ದಿನಾಂಕ:01/02/2021 ಹಾಗೂ ಇಂಧನ ಇಲಾಖೆಯ ಟಿಪ್ಪಣಿ ಸಂಖ್ಯೆ:ಎನರ್ಜಿ 807 ವಿಎಸ್‌ಸಿ 2021, ದಿನಾಂಕ:31/1/2022 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

10/3/2022
(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಆಡಿಟ್), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ಬೆಂಗಳೂರು.

4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್), ಕಾವೇರಿ ಭವನ, ಬೆಂಗಳೂರು.
8. ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
10. ಮುಖ್ಯ ಇಂಜಿನಿಯರ್, ಅಣೆಕಟ್ಟು ವಲಯ, ಆಲಮಟ್ಟಿ.
11. ಸರ್ಕಾರದ ಉಪ ಕಾರ್ಯದರ್ಶಿ (ಕೃಭಾಜನಿ), ಜಲ ಸಂಪನ್ಮೂಲ ಇಲಾಖೆ.
12. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.

10/3/2022